**4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು**

**ಸಿಸಿ ನಂ. 20544/2017 ಚಾಸಾಃ 9 ಪ್ರಾಸಾಃ 6**

| | | |
|---|---|---|
| ಸಾಕ್ಷಿದಾರರ ಹೆಸರು | : | ಚಲುವರಾಜು |
| ತಂದೆಯ ಹೆಸರು | : | ಕದಿರಪ್ಪ |
| ವಯಸ್ಸು | : | 51 ವರ್ಷ |
| ವೃತ್ತಿ | : | ವ್ಯಾಪಾರ |
| ವಾಸ | : | ಪದ್ಮನಾಭನಗರ, ಬೆಂಗಳೂರು |

**ಸಾಕ್ಷಿಯನ್ನು ದಿಃ 01.10.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-**

ಆರೋಪಿಗಳ ಪರಿಚಯ ಇರುತ್ತದೆ. ನಾನು 2015-16 ರ ಸಾಲಿನಲ್ಲಿ ಕನಕಪುರ ರಸ್ತೆಯಲ್ಲಿರುವ ಬನಶಂಕರಿ ದೇವಾಲಯದ ಅಭಿವೃದ್ದಿ ಕಮಿಟಿಯ ಸದಸ್ಯನಾಗಿದ್ದೆನು. 1ನೇ ಮತ್ತು 2ನೇ ಆರೋಪಿತರು ಸದರಿ ದೇವಸ್ಥಾನದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. 2015ರಲ್ಲಿ ಸದರಿ ದೇವಸ್ಥಾನದ ಕಿರೀಟ ಮತ್ತು ಪಾದುಕೆ ಭಿನ್ನವಾಗಿರುವುದು ನಮಗೆ ತಿಳಿಯಿತು. ಈ ಸಂಬಂಧ ನಾವು ಸಭೆ ಮಾಡಿರುತ್ತೇವೆ. ಬೇರೆ ವಿಚಾರ ನಮಗೆ ಗೊತ್ತಿಲ್ಲ. ಸದರಿ ಕಿರೀಟ ಮತ್ತು ಪಾದುಕೆಯ ಭಾಗವನ್ನು ಕತ್ತರಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಗಳನ್ನು ನೀಡಿಲ್ಲ.

**ಸೂಚನೆಃ ಈ ಹಂತದಲ್ಲಿ ಪ್ರಾಜ್ಞಾ ಹಿ.ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಬೇಕೆಂದು ನ್ಯಾಯಾಲಯಕ್ಕೆ ಮನವಿಯನ್ನು ಕೋರಿರುತ್ತಾರೆ. ಅದರಂತೆ ಅನುಮತಿಯನ್ನು ನೀಡಲಾಯಿತು.**

**ಪಾಟೀ ಸವಾಲುಃ ಪ್ರಾಜ್ಞಾ ಹಿ.ಸ.ಸ.ಅ. ರವರಿಂದಃ**

ನಾನು ಪೊಲೀಸರ ಮುಂದೆ ದಿಃ10.06.2015 ರಂದು ನಾನು ಮಾಮೂಲಿನಂತೆ--------------------ತಮ್ಮಲ್ಲಿ ತಿಳಿಸಿರುತ್ತೇನೆ ಎಂದು ಹೇಳಿಕೆ

ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-26 ಎಂದು ಗುರ್ತಿಸಲಾಯಿತು. ಮುಂದುವರೆದು ನಾನು ದಿನಾಂಕಃ17.04.2017 ರಂದು ಪೊಲೀಸರ ಮುಂದೆ "ಪ್ರಧಾನ ಅರ್ಚಕರಾದ ------------------ ಗುರ್ತಿಸುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-27 ಎಂದು ಗುರ್ತಿಸಲಾಯಿತು. ನಾನು ನಿಪಿ-26 ಮತ್ತು 27 ರಂತೆ ಹೇಳಿಕೆ ನೀಡಿದ್ದರು ಈಗ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಇಲ್ಲವೆಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**